ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	536
ಮಾನ್ಯ ಸದಸ್ಯರ ಹೆಸರು	:	ಶ್ರೀ ಅ.ದೇವೇಗೌಡ (ಪದವೀಧರರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	21-02-2022
ಉತ್ತರಿಸುವ ಸಚಿವರು	:	ಪ್ರವಾಸೋದ್ಯಮ, ಪರಿಸರ ಮತ್ತು ಜೀವಿಶಾಸ್ತ್ರ, ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ನಾಡಪ್ರಭು ಕೆಂಪೇಗೌಡರು ರಾಮನಗರ ಜಿಲ್ಲೆಯ ಮಾಗಡಿ ಟೌನ್‌ನಲ್ಲಿ 500 ವರ್ಷಗಳ ಹಿಂದೆ ಕೋಟೆಯನ್ನು ನಿರ್ಮಿಸಿದ್ದು, ಕೋಟೆಯ ಮೂಲ ಸ್ವರೂಪವೇ ಶಿಥಿಲವಾಗಿದ್ದು, ಈ ಕೋಟೆಗೆ ಸರ್ಕಾರದಿಂದ/ಪುರಾತತ್ವ ಇಲಾಖೆಯಿಂದ ಅನುದಾನ ಬಿಡುಗಡೆ ಮಾಡಲಾಗಿದೆಯೇ;	ಸರ್ಕಾರದ ಆದೇಶ ಸಂಖ್ಯೆ: ಪ್ರಇ 162 ಪ್ರವಾಯೋ 2013, ದಿನಾಂಕ: 08-10-2013ರಲ್ಲಿ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ, ಮಾಗಡಿ ಕೋಟೆಯ ಸಂರಕ್ಷಣೆ ಮತ್ತು ಅಭಿವೃದ್ಧಿ ಕಾಮಗಾರಿಯನ್ನು ಆಯುಕ್ತರು, ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರುರವರು ಸಲ್ಲಿಸಿರುವ ಅಂದಾಜು ಪಟ್ಟಿಯಂತೆ ರೂ. 486.79 ಲಕ್ಷಗಳ ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಿ, ಕೇಂದ್ರ ಸರ್ಕಾರ ಮೊದಲ ಕಂತಾಗಿ ಬಿಡುಗಡೆ ಮಾಡಿರುವ ರೂ. 389.43 ಲಕ್ಷಗಳನ್ನು ಆಯುಕ್ತರು, ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರುರವರಿಗೆ ಬಿಡುಗಡೆ ಮಾಡಲಾಗಿದೆ. ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯವು ಅನುಮೋದನೆ ನೀಡಿರುವ ರೂ.486.79 ಲಕ್ಷಗಳ ಕಾಮಗಾರಿಗಳಲ್ಲಿ Site Development Works ನಡಿ ಮಾಗಡಿ ಕೋಟೆಯ ಸಂರಕ್ಷಣಾ ಕಾಮಗಾರಿಯನ್ನು ರೂ.291.17ಲಕ್ಷಗಳ ವೆಚ್ಚದಲ್ಲಿ ಕೈಗೊಳ್ಳಲಾಗಿದೆ. ಈ ಯೋಜನೆಯಡಿ ಮಾಗಡಿ ಕೋಟೆಯ ಉತ್ತರ ಭಾಗದ 138.5 ಮೀಟರ್ ಉದ್ದದ ಗೋಡೆಯ (5.5 ಮೀಟರ್ ಎತ್ತರಕ್ಕೆ) ಸಂರಕ್ಷಣೆಯನ್ನು ಹಾಗೂ ಪಶ್ಚಿಮ ಭಾಗದಲ್ಲಿ 166 ಮೀಟರ್ ಉದ್ದದ ಕೋಟೆಯ ಭಾಗವನ್ನು ಪೂರ್ಣಗೊಳಿಸಲಾಗಿದೆ. ಪೂರ್ವಭಾಗದಲ್ಲಿ 105 ಮೀಟರ್ ಗೋಡೆಯು (3.2 ಮೀಟರ್ ಎತ್ತರಕ್ಕೆ) ಸಂರಕ್ಷಿಸಲಾಗಿದೆ. ಉತ್ತರ ಭಾಗದಲ್ಲಿ 89 ಮೀಟರ್ ಮಣ್ಣಿನ ಅಗತ ಹಾಗೂ ತಳಪಾಯವನ್ನು ಭದ್ರಪಡಿಸುವ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ. ಮಾಗಡಿ ಕೋಟೆಯ ಒಟ್ಟಾರೆ ಉದ್ದ 1030 ಮೀಟರ್ ಇದ್ದು, ಇದರಲ್ಲಿ 528 ಮೀಟರ್ ಸುಸ್ಥಿತಿಯಲ್ಲಿರುತ್ತದೆ. 502 ಮೀಟರ್ ಕೋಟೆ ಗೋಡೆಯ ಸಂರಕ್ಷಣೆ ಕೈಗೊಳ್ಳುವುದು ಬಾಕಿ ಇರುತ್ತದೆ.
ಆ)	ಬಿಡುಗಡೆ ಮಾಡಿದ್ದಲ್ಲಿ, ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ಮತ್ತು ಯಾವಾಗ;	
ಇ)	ಹಣ ಬಿಡುಗಡೆ ಮಾಡಿದ್ದಲ್ಲಿ, ಇಲ್ಲಿಯವರೆಗೂ ಜೀರ್ಣೋದ್ಧಾರವಾಗದೇ ಇರಲು ಕಾರಣವೇನು; ಜೀರ್ಣೋದ್ಧಾರ ಕಾರ್ಯವನ್ನು ಮುಗಿಸಲು ಇನ್ನೂ ಎಷ್ಟು ಸಮಯಾವಕಾಶ ಬೇಕಾಗುತ್ತದೆ; ನಿಗದಿತ ಸಮಯದಲ್ಲಿ ಪೂರ್ಣಗೊಳಿಸದೆ ಇರುವುದಕ್ಕೆ ಕಾರಣಗಳೇನು; ಈ ಬಗ್ಗೆ ಕೈಗೊಂಡ ಕ್ರಮಗಳೇನು? (ಸಂಪೂರ್ಣ ವಿವರಣೆಯನ್ನು ನೀಡುವುದು)	

..2..

		ದಿನಾಂಕ:16.12.2020ರಂದು ಪುರಾತತ್ವ ಸಂರಕ್ಷಣಾ ಇಂಜಿನಿಯರ್ ವಿಭಾಗ ಮತ್ತು ಪ್ರವಾಸೋದ್ಯಮ ಇಲಾಖೆಯ ತಾಂತ್ರಿಕ ವಿಭಾಗದವರ ಜಂಟಿ ಪರಿವೀಕ್ಷಣೆಯನ್ವಯ ಕೋಟೆಯ ಸಂಪೂರ್ಣ ಸಂರಕ್ಷಣೆಗೆ ಆಯುಕ್ತರು, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರುರವರು ರೂ.570.00 ಲಕ್ಷಗಳ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆರವರಿಗೆ ಸಲ್ಲಿಸಿದ್ದು, ಸದರಿ ಅಂದಾಜು ಪಟ್ಟಿಯು ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆರವರ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ.

ಸಂಖ್ಯೆ: ಟಿಓಆರ್ 30 ಟಿಡಿವಿ 2022

(ಆನಂದ್ ಸಿಂಗ್)
ಪ್ರವಾಸೋದ್ಯಮ, ಪರಿಸರ ಮತ್ತು
ಜೀವಿಶಾಸ್ತ್ರ ಸಚಿವರು